**SC No. 149/2025**
**PW-5**
**CW-9**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ: 57)<br>ನಮೂನೆ ಸಂಖ್ಯೆ: 4 |

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ: **149/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸಚೀನ್ ಕುಮಾರ್ ಹಿರೇಮಠ | ಪ್ರಾಸಾ: 5 |
| ತಂದೆಯ ಹೆಸರು | : | ವಿಶ್ವನಾಥ ಹಿರೇಮಠ | ಚಾಸಾ: 9 |
| ವಯಸ್ಸು | : | 36 ವರ್ಷ | ದಿನಾಂಕ : 12.08.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಮಕ್ಕಳ ರಕ್ಷಣಾ ಅಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಬೆಳಗಾವಿ | |
| ವಾಸಸ್ಥಳ | : | ಚಿಕ್ಕೋಡಿ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನಾನು ಕಳೆದ 8 ವರ್ಷಗಳಿಂದ ಬೆಳಗಾವಿಯ ಮಕ್ಕಳ ರಕ್ಷಣಾ ಘಟಕದಲ್ಲಿ ಮಕ್ಕಳ ರಕ್ಷಣಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ನನಗೆ ಚಾಸಾ-10 ಇವರ ಪರಿಚಯವಿದೆ. ಅವರು ನಮ್ಮ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ದಿ: 21.06.2024 ರಂದು ಮಧ್ಯಾಹ್ನ 2-30 ಗಂಟೆಗೆ ಮಾಳಮಾರುತಿ ಪೋಲಿಸರು ನನ್ನನ್ನು ಮತ್ತು ಚಾಸಾ-10 ರವರನ್ನು ಬೆಳಗಾವಿ ಜಿಲ್ಲಾ

**SC No. 149/2025**
**PW-5**
**CW-9**

ಆಸ್ಪತ್ರೆಯ ಶವಾಗಾರಕ್ಕೆ ಕರೆಸಿದ್ದರು. ಆಸ್ಪತ್ರೆಯ ಶವಾಗಾರದಲ್ಲಿ ಸುಮಾರು 20 ರಿಂದ 30 ದಿನಗಳ ಒಂದು ಹೆಣ್ಣು ಮಗುವಿನ ಶವ ಇತ್ತು. ಆ ಮಗುವಿನ ಎರಡು ಕಣ್ಣು ಮತ್ತು ಬಾಯಿ ತೆರೆದಿತ್ತು. ಆ ಮಗುವಿನ ಬಲ ಮೊಣಕ್ಕೆ ಕೆಂಪು ಬಣ್ಣ ಇತ್ತು. ಎಡ ಮೊಣಕ್ಕೆ ಕೆಂಪಾಗಿತ್ತು. ಆ ಶವದ ಬಲಗಾಲು ಕೆಂಪು ಆಗಿತ್ತು. ಆ ಮಗುನಿನ ಎಡ ಮೊಣಕ್ಕೆಗೆ ಬಿಳಿ ಬಣ್ಣದ ಬ್ಯಾಂಡೇಜ್ ಹಾಕಿದ್ದರು. ಆ ಮಗುವಿನ ಎಡಕಾಲಿಗೆ ಬ್ಯಾಂಡೇಜ್ ಸುತ್ತಿದ್ದರು. ಆ ಮಗುವಿನ ಸೊಂಟದಲ್ಲಿ ಒಂದು ಬಿಳಿ ಬಣ್ಣದ ಡೈಪರ್ ಹಾಕಿದ್ದರು. ಮಧ್ಯಾಹ್ನ 2-30 ರಿಂದ 4-30 ಅವಧಿಯಲ್ಲಿ ಪೋಲಿಸರು ನನ್ನ ಸಮಕ್ಷಮ ಶವ ಪಂಚನಾಮೆಯನ್ನು ಮಾಡಿದ್ದರು. ಆ ಶವ ಪಂಚನಾಮೆಯನ್ನು ನಿಪಿ-16 ಎಂದು ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-16(ಎ) ಎಂದು ಗುರುತಿಸಲಾಗಿದೆ. ಆ ಪಂಚನಾಮೆಯ ಕಾಲಕ್ಕೆ ಪೋಲಿಸರು 2 ಪೋಟೋಗಳನ್ನು ತೆಗೆದಿದ್ದು ಅವುಗಳನ್ನು ನಿಪಿ-17 ಮತ್ತು ನಿಪಿ-18 ಎಂದು ಗುರುತಿಸಲಾಗಿದೆ.

ಪಾಟೀ ಸವಾಲುಃ 1ನೇ ಆರೋಪಿತರ ಪರವಾಗಿಃ ಶ್ರೀ ಸಿ. ಎ. ಟಿ. ವಕೀಲರಿಂದಃ

3. ಈ ಪಂಚನಾಮೆಗೆ ಬರಬೇಕೆಂದು ಪೋಲಿಸರು ನನಗೆ ಯಾವುದೇ ನೋಟಿಸನ್ನು ಕೊಟ್ಟಿರಲಿಲ್ಲ. ನಮ್ಮ ಇಲಾಖೆಯ ಹಿರಿಯ ಅಧಿಕಾರಿಗಳ ಸೂಚನೆಯ ಮೇರೆಗೆ ನಾನು ಆ ಪಂಚನಾಮೆಗೆ ಹಾಜರಾಗಿದ್ದೇನು. ನಿಪಿ-16 ಪಂಚನಾಮೆಯಲ್ಲಿ ಎನು ಮತ್ತು ಯಾರು ಬರೆದಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪೋಲಿಸರು ನಮಗೆ ನಾವು ಅಲ್ಲಿ ಪಂಚನಾಮೆ ಮಾಡಿದ್ದೇವೆಂದು ತೋರಿಸಬೇಕಾಗುತ್ತದೆ ಎಂದು ಹೇಳಿ ನಿಪಿ-16 ಪಂಚನಾಮೆಗೆ ನಮ್ಮ ಸಹಿಗಳನ್ನು ಪಡೆದುಕೊಂಡಿದ್ದರು. ಪಂಚನಾಮೆ ಮಾಡಿದ್ದನ್ನು ತೋರಿಸುವ ಸಲುವಾಗಿ ಪೋಟೊ ತೆಗೆಯಬೇಕು ಎಂದು ಹೇಳಿ ನಿಪಿ-17 ಮತ್ತು ನಿಪಿ-18 ಪೋಟೋಗಳನ್ನು ತೆಗೆದಿದ್ದರು. ಪೋಲಿಸರು ನನ್ನ ಸಮಕ್ಷಮ ಯಾವುದೇ ಶವ ಪಂಚನಾಮೆ

ಮಾಡಿಲ್ಲ ಎನ್ನುವುದು ನಿಜವಲ್ಲ. ಪೋಲಿಸರು ನನ್ನ ಸಮಕ್ಷಮ ನಿಪಿ-16 ರಂತೆ ಶವ ಪಂಚನಾಮೆ ಮಾಡಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ. ಈ ಪ್ರಕರಣದಲ್ಲಿ ಪಿರ್ಯಾದಿಯನ್ನು ನಮ್ಮ ಇಲಾಖೆಯವರೇ ಕೊಟ್ಟಿರುವ ಕಾರಣ ಅದಕ್ಕೆ ಅನುಕೂಲವಾಗಲಿ ಎಂದು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ನಿಜವಲ್ಲ.

<u>ಪಾಟೀ ಸವಾಲುಃ ಇತರ ಆರೋಪಿತರ ಪರವಾಗಿಃ</u>

ಇತರ ಆರೋಪಿತರ ವಕೀಲರು ಮೇಲಿನ ಪಾಟೀ ಸವಾಲನ್ನು ಅನುಸರಿಸುವುದಾಗಿ ಹೇಳುತ್ತಾರೆ.

ಮರು ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.